# ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ

**ಕೃಷ್ಣರಾಜೇಂದ್ರ ವೃತ್ತ, ಬೆಂಗಳೂರು – 560 001**

## ಆಡಳಿತ ವರದಿ

ಅತ್ಮೀಯ ಇಲಾಖೆಯ ಸಹೋದ್ಯೋಗಿಗಳೇ ಹಾಗೂ ಸಹಕಾರಿ ಬಂಧುಗಳೇ,

ಎಲ್ಲಾ ರೀತಿಯಲ್ಲೂ ಸರ್ವರಿಗೂ ಸಮಬಾಳು, ಸಮಪಾಲು ಎನ್ನುವ ಸಹಕಾರ ಧರ್ಮವನ್ನು ಪಾಲಿಸುತ್ತಾ ಸಹಕಾರ ಎಂಬುದು ಸಾರ್ವತ್ರಿಕ ಜವಾಬ್ದಾರಿಯ ಜೊತೆಗೆ ಪರಸ್ಪರ ಹಿತವನ್ನು ಕಾಯ್ದುಕೊಂಡು ಎಲ್ಲರಿಗೂ ಸಮಾನತೆಯನ್ನು ದೊರಕಿಸುತ್ತಾ, ಸಾಮಾಜಿಕವಾಗಿ ಉನ್ನತೀಕರಿಸುವುದೇ ಆಗಿದೆ. ಸಹಕಾರ ತತ್ವದ ಈ ನೀತಿಯನ್ನೇ ಧ್ಯೇಯವನ್ನಾಗಿಸಿಕೊಂಡು 1964 ನೇ ವರ್ಷದಲ್ಲಿ ನೋಂದಣಿ ಸಂಖ್ಯೆ: 1998 ಆರ್.ಸಿ.ಎಸ್. 1964 ರ ಮೇರೆಗೆ ನೊಂದಾಯಿಸಲ್ಪಟ್ಟು, ಸಂಘದ ಸದಸ್ಯರುಗಳ ಕಷ್ಟಗಳಿಗೆ ಸ್ಪಂದಿಸುತ್ತಾ ಪ್ರತಿ ವರ್ಷವು ಅಭಿವೃದ್ಧಿ ಪಥದಲ್ಲಿ ದಾಪುಗಾಲು ಹಾಕುತ್ತಿರುವ ಈ ಸಹಕಾರ ಸಂಘದ ಆಡಳಿತ ಸಮಿತಿ ಪರವಾಗಿ ತಮ್ಮೆಲ್ಲರನ್ನು ಇಂದು ನಡೆಯುತ್ತಿರುವ 44 ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಗೆ ಹಾರ್ದಿಕವಾಗಿ ಸ್ವಾಗತಿಸಿ, ಆಡಳಿತ ವರದಿ ಮಂಡಿಸಲು ನನಗೆ ತುಂಬಾ ಸಂತೋಷವಾಗುತ್ತದೆ.

## ಸಂಘದ ಸ್ಥೂಲ ಪರಿಚಯ

1. **ಸದಸ್ಯತ್ವ :** ವರದಿ ಸಾಲಿನ ಪ್ರಾರಂಭದಲ್ಲಿ ಸಂಘದ 2100 ಸದಸ್ಯರಿದ್ದು, ಕೆಲವು ಸದಸ್ಯರು ಮೃತಪಟ್ಟು ಹಾಗೂ ನಿವೃತ್ತಿಯಿಂದ ಒಟ್ಟು 60 ಸದಸ್ಯರು ತಮ್ಮ ಸದಸ್ಯತ್ವ ವಾಪಸ್ಸು ಪಡೆದುಕೊಂಡಿದ್ದು, ಉಳಿಕೆ ಸದಸ್ಯರು 2040 ಹಾಗೂ 191 ಹೊಸ ಸದಸ್ಯರ ಸೇರ್ಪಡೆಯಿಂದ ಸಂಘವು ಹಾಲಿ ಒಟ್ಟು 2231 ಸದಸ್ಯರುಗಳನ್ನು ಹೊಂದಿರುತ್ತದೆ.

2. **ಷೇರು ಬಂಡವಾಳ :** ಸಹಕಾರ ಸಂಘದ ವರದಿ ಸಾಲಿನ ಪ್ರಾರಂಭದಲ್ಲಿ 86,85,500–00 ರೂ. ಇದ್ದು ಷೇರು ಮೊತ್ತ 11,58,500–00 ರೂ. ಸ್ವೀಕೃತವಾಗಿದ್ದು ಈ ಪೈಕಿ 12,30,100–00 ರೂ.ಗಳನ್ನು ವಾಪಸ್ಸು ಮಾಡಲಾಗಿ ಸಾಲಿನ ಅಂತ್ಯಕ್ಕೆ 86,13,900–00 ರೂ. ಷೇರು ಮೊತ್ತ ಇರುತ್ತದೆ.

3. **ಸಾಲಗಳು :** ಈ ಸಹಕಾರ ಸಂಘದ ಬಂಡವಾಳ ಹಾಗೂ ಸದಸ್ಯರುಗಳ ಉಳಿತಾಯದ ಹಣದಿಂದ ಮಾನ್ಯ ಸದಸ್ಯರುಗಳಿಗೆ 3,00,000–00ರೂ. ಗಳ ಸಾಲ ನೀಡಲಾಗುತ್ತಿದೆ. ಹಾಗೂ 529 ಸದಸ್ಯರುಗಳು ಸಂಘದಿಂದ ಸಾಲವನ್ನು ಪಡೆದುಕೊಂಡಿರುತ್ತಾರೆ ವರದಿ ಸಾಲಿನಲ್ಲಿ 3,50,35,000–00 ರೂ.ಗಳ ಸಾಲವನ್ನು ನೀಡಲಾಗಿದೆ. ಹಾಗೂ ಇಲ್ಲಿಯವರೆಗೆ 9,02,00,976–00 ರೂ.ಗಳ ಅಲ್ಪಾವಧಿ ಸಾಲ ನೀಡಲಾಗಿರುತ್ತದೆ ಎಂಬ ಅಂಶವನ್ನು ಮಹಾಸಭೆಗೆ ತಿಳಿಸಲು ಹರ್ಷಿಸುತ್ತೇನೆ.

4. **ತ್ರೀಫ್ಟ್ ಉಳಿತಾಯ ನಿಧಿ :** ಸಂಘವು ತನ್ನದೇ ಆದ ಸ್ವಂತ ಬಂಡವಾಳ ಕ್ರೂಢೀಕರಿಸಿಕೊಳ್ಳಲು ಸದಸ್ಯರುಗಳಿಂದ ತ್ರೀಫ್ಟ್ (ಉಳಿತಾಯ) ನಿಧಿಯನ್ನು ವಸೂಲು ಮಾಡುತ್ತಿದ್ದು, 2023–24ನೇ ಸಾಲಿನಾಂತ್ಯದಲ್ಲಿ ಸಂಘವು ಒಟ್ಟು 6,77,85,683–00 ರೂ.ಗಳ ತ್ರೀಫ್ಟ್ ನಿಧಿಯನ್ನು ಹೊಂದಿರುತ್ತದೆ.

5. **ಇತರೆ ನಿಧಿಗಳು :** 2023–24ನೇ ಸಾಲಿನಂತ್ಯದಲ್ಲಿ ಸಂಘವು ಅಪದ್ಧನ ಠೇವಣಿಯಾಗಿ 99,84,137–00 ರೂ. ಗಳನ್ನು ಹಾಗೂ 40,000–00 ರೂ.ಗಳ ಬಿ.ಡಿ.ಸಿ.ಸಿ. ಬ್ಯಾಂಕ್ ಷೇರು ಮೊತ್ತವನ್ನು ಸಹ ಹೊಂದಿರುತ್ತದೆ.

**6. ಮರಣೋತ್ತರ ಪರಿಹಾರ ನಿಧಿ :** ಸಂಘವು ಸದಸ್ಯರುಗಳಿಂದ 500–00ರೂ. ಮಾತ್ರ ಮರಣ ಪರಿಹಾರ ವಂತಿಗೆಯನ್ನು ವಸೂಲು ಮಾಡುತ್ತಿದ್ದು, ಮೃತ ಸದಸ್ಯರ ನಾಮ ನಿರ್ದೇಶಿತರಿಗೆ ರೂ. 10,000–00ಗಳನ್ನು ಮರಣಾನಂತರ ಪರಿಹಾರವಾಗಿ ತಕ್ಷಣವೇ ವಿತರಿಸಲಾಗುತ್ತಿದೆ. ವರದಿ ಸಾಲಿನಲ್ಲಿ ಮೃತರಾದ 14 ಸದಸ್ಯರಿಗೆ ಒಟ್ಟು 1,40,000 ರೂ.ಗಳ ಮರಣ ಪರಿಹಾರವನ್ನು ಪಾವತಿಸಲಾಗಿದೆ.

**7. ಆವರ್ತಕ ಠೇವಣಿ :** ಸಂಘದ ಸದಸ್ಯರುಗಳು ಮತ್ತು ಸಾರ್ವಜನಿಕರಲ್ಲಿ ಉಳಿತಾಯ ಮನೋಭಾವ ಬೆಳೆಸಲು ಆರ್.ಡಿ. ಉಳಿತಾಯ ಖಾತೆ ಯೋಜನೆ ಪ್ರಾರಂಭಿಸಿದ್ದು ದಿನಾಂಕ : 31–3–2024 ಅಂತ್ಯಕ್ಕೆ ರೂ. 63,65,000–00 ರೂಗಳ ಆರ್.ಡಿ. ಠೇವಣಿಯನ್ನು ಹೊಂದಿರುತ್ತದೆ.

**8. ಸಭೆಗಳು :** ಆಡಳಿತ ಮಂಡಳಿಯು ಆಗಿಂದಾಗ್ಗೆ ಸಭೆ ಸೇರಿ, ಜಮಾ ಖರ್ಚು ಮತ್ತು ಲಾಭ ನಷ್ಟದ ತಃಖ್ತೆಗಳನ್ನು, ಸದಸ್ಯರುಗಳಿಂದ ಬಂದಿರುವ ಸಾಲಕ್ಕಾಗಿ ಅರ್ಜಿ, ಸದಸ್ಯತ್ವಕ್ಕಾಗಿ ಅರ್ಜಿ, ಇನ್ನಿತರ ಸಂಘದ ಎಲ್ಲಾ ಪತ್ರ ವ್ಯವಹಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಹಾಗೂ ಚರ್ಚಿಸಿ, ಸಮಂಜಸವಾದ ನಿರ್ಧಾರವನ್ನು ಕೈಗೊಳ್ಳುತ್ತಿದ್ದು, 2023–24ನೇ ಸಾಲಿನಲ್ಲಿ ಒಟ್ಟು 14 ಸಭೆಗಳನ್ನು ನಡೆಸಲಾಗಿರುತ್ತದೆ.

ಸಂಘದ ಲೆಕ್ಕಪತ್ರಗಳನ್ನು ಸಂಪೂರ್ಣವಾಗಿ ಗಣಕೀರಣಗೊಳಿಸುವ ನಿಟ್ಟಿನಲ್ಲಿ ಸಾಫ್ಟ್‌ವೇರ್ ಅಳವಡಿಸಿಕೊಂಡಿದ್ದು, ಸಂಘದ ಎಲ್ಲಾ ಆರ್ಥಿಕ ಕಾರ್ಯಗಳನ್ನು ಗಣಕೀಕರಣ ಮುಖೇನ ನಡೆಸಲಾಗುತ್ತಿದೆ. ಸದಸ್ಯರ ಲೆಕ್ಕಗಳಲ್ಲಿ ಯಾವುದೇ ತಪ್ಪುಗಳಿಗೆ ಆಸ್ಪದವಾಗದಂತೆ ಗಣಕೀಕರಣದ ಮೂಲಕ ಹೆಚ್ಚಿನ ಮುತುವರ್ಜಿವಹಿಸಿ ಕ್ರಮವಹಿಸಲಾಗುತ್ತದೆ.

ಹಾಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಂ.ಎಸ್. ಬಿಲ್ಡಿಂಗ್ ಶಾಖೆಯಲ್ಲಿ ಚಾಲ್ತಿ ಖಾತೆ ತೆರೆದಿರುವುದರಿಂದ ರಾಜ್ಯದ ಯಾವ ಮೂಲೆಯಲ್ಲಿರುವ ಸದಸ್ಯರು ನೇರವಾಗಿ NEFT, RTGS & UPI ಮೂಲಕವೂ ಕೂಡ ಈ ಖಾತೆಗೆ ಸಾಲದ ಕಂತನ್ನು ಪಾವತಿಸಬಹುದಾಗಿದೆ. ಅಲ್ಪಾವಧಿ ಸಾಲ ಪಡೆದಿರುವ ಸಂಘದ ಸದಸ್ಯರುಗಳಿಗೆ ತಮ್ಮ ಬ್ಯಾಂಕ್ ಖಾತೆಯಿಂದ ECS ಸೌಲಭ್ಯದ ಮೂಲಕ ಸಂಘದ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡುವ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಇದರಿಂದ ಸದಸ್ಯರ ಮೇಲಿನ ಹೆಚ್ಚಿನ ಬಡ್ಡಿ ಹೊರೆಯನ್ನು ತಪ್ಪಿಸಿ, ಸಕಾಲದಲ್ಲಿ ಪಾವತಿಸಲು ಅವಕಾಶ ಕಲ್ಪಿಸಲು ಪ್ರಯತ್ನಿಸಲಾಗಿದೆ.

ಆಧುನಿಕ ಯುಗದಲ್ಲಿ ಕಛೇರಿಗಳನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ದೃಷ್ಟಿಯಿಂದ ಕಛೇರಿಗಳನ್ನು ಆಧುನಿಕರಣಗೊಳಿಸುವುದು ಅತ್ಯವಶ್ಯವಾಗಿದೆ. ಸಂಘದ ಕಛೇರಿಯನ್ನೂ ಸಹ ಆಧುನೀಕರಣಗೊಳಿಸಿ, ಶೀಘ್ರವಾಗಿ ಕಛೇರಿ ಕೆಲಸಗಳು ಸುಸೂತ್ರವಾಗಿ ನಡೆಸಲು ಅನುಕೂಲ ಕಲ್ಪಿಸಲಾಗಿದೆ. ಅಲ್ಲದೆ, ಅಂತರ್ಜಾಲ ಸಂಪರ್ಕದ ಮೂಲಕ ಸಾಲ ಮುರಿಕೆ ತಖ್ತೆಯನ್ನು ಇಲಾಖೆಯ ವೇತನ ಬಟವಾಡೆ ಅಧಿಕಾರಿಗಳ ಕಛೇರಿಗಳಿಗೆ ಮೇಲ್ ಮುಖಾಂತರ ಕಳುಹಿಸಲಾಗುತ್ತದೆ. ಇದರಿಂದ ಕಛೇರಿಗಳಿಂದ ಶೀಘ್ರವಾಗಿ ಸಾಲ ವಸೂಲಾತಿಗೆ ಸಾಧ್ಯವಾಗಲಿದೆ.

ಸಂಘದ ಸುಸ್ತಿದಾರರ ಬಗ್ಗೆ ಆಡಳಿತ ಮಂಡಳಿಯು ಕಠಿಣ ನಿರ್ಧಾರಗಳನ್ನು ಕೈಗೊಂಡು ಸುಸ್ತಿದಾರರ ಸಂಖ್ಯೆಯನ್ನು ಕಡಿಮೆಗೊಳಿಸಲು ಶ್ರಮಿಸುತ್ತಿದೆ. ಹಾಲಿ ಸಂಘದಲ್ಲಿ ಸಂಘದ ಷೇರು ಮತ್ತು ತ್ರೀಫ್ಟ್ ಹಣದಿಂದಲೇ ಸಂಘವನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯಲು ಸಾಧ್ಯವಾಗಿದೆ ಎಂದು ಆಡಳಿತ ಮಂಡಳಿ ಪರವಾಗಿ ಹೇಳಲು ಹೆಮ್ಮೆಯಾಗುತ್ತಿದೆ.

ಮುಂದುವರೆದು, ಈ ಮೂಲಕ ನಮ್ಮ ಸಂಘದ ಆಡಳಿತ ಮಂಡಳಿಯ ಪರವಾಗಿ, ಇಲಾಖೆಯ ಎಲ್ಲಾ ವೇತನ ಬಟವಾಣೆ ಅಧಿಕಾರಿಗಳಿಗೆ ಹಾಗೂ ವೇತನ ಸಂಕಲನದ ವಿಷಯ ನಿರ್ವಾಹಕರುಗಳಿಗೆ ಸಂಘದ

ಸದಸ್ಯರುಗಳ ತ್ರೀಫ್ಟ್ (ಉಳಿತಾಯ) ಹಾಗೂ ಸಾಲದ ಕಂತುಗಳನ್ನು ಕಡ್ಡಾಯವಾಗಿ ನಮ್ಮ ಸಂಘವು ಕಳುಹಿಸಿರುವ ಸಾಲ ಮುರಿಕೆ ವಿವರದ ತಃಖ್ತೆಯನ್ವಯ ಪ್ರತಿ ಮಾಹೆ ಕಟಾವಣೆ ಮಾಡಿ, ಸಂಘದಲ್ಲಿರುವ ಸುಸ್ತಿದಾರರ ಸಂಖ್ಯೆಗಳನ್ನು ಕಡಿಮೆ ಮಾಡಲು ಕ್ರಮವಹಿಸಿ, ಸಂಘದ ಏಳ್ಗೆಗಾಗಿ ತಾವುಗಳು ನೇರವಾಗಿ ಭಾಗವಹಿಸಬೇಕೆಂದು ಅತ್ಯಂತ ವಿನಮ್ರವಾಗಿ ಈ ಮೂಲಕ ಕೋರಲು ಇಚ್ಚಿಸುತ್ತೇನೆ.

ಸಂಘದ ಸದಸ್ಯರುಗಳಿಗೆ ಈ ಮೂಲಕ ವಿನಂತಿಸುವುದೇನೆಂದರೆ, ಸದ್ಯ ವರದಿ ಸಾಲಿನಂತ್ಯಕ್ಕೆ ನಮ್ಮ ಈ ಸಹಕಾರ ಸಂಘದಲ್ಲಿ ಒಟ್ಟು 2231 ಸದಸ್ಯರುಗಳಿದ್ದು, ತಾವೆಲ್ಲರೂ ನೀವುಗಳು ಕಾರ್ಯನಿರ್ವಹಿಸುತ್ತಿರುವ ಕಛೇರಿಗಳಿಲ್ಲಿರುವ ಅಧಿಕಾರಿ/ಸಿಬ್ಬಂದಿಗಳಿಗೆ ನಮ್ಮ ಸಂಘದಲ್ಲಿ ಸದಸ್ಯತ್ವ ಪಡೆಯಲು ಪ್ರೇರೇಪಿಸಿ, ಮುಂದಿನ ವಾರ್ಷಿಕ ಮಹಾಸಭೆಯೊಳಗೆ ನಮ್ಮ ಸಂಘವು 3,500ಕ್ಕಿಂತ ಜಾಸ್ತಿ ಸದಸ್ಯರುಗಳನ್ನು ಹೊಂದಲು ಸಹಕರಿಸಿ ನಮ್ಮ ಸಹಕಾರ ಸಂಘವು ಇನ್ನಷ್ಟು ಬೆಳೆಯಲು ಕಾರಣಿಭೂತರಾಗಬೇಕೆಂದು ನಮ್ಮಲ್ಲಿ ಸದಸ್ಯ ಮಿತ್ರರುಗಳಿಗೆ ಈ ಮೂಲಕ ಕೋರಲು ಇಚ್ಚಿಸುತ್ತೇನೆ.

ಆದೇ ರೀತಿ ಇಲ್ಲಿ ನೆರೆದಿರುವ ನಮ್ಮ ಸಂಘದ ಎಲ್ಲಾ ಸದಸ್ಯರುಗಳಿಗೆ ನಮ್ಮ ಸಹಕಾರ ಸಂಘವು ಉತ್ತಮ ರೀತಿಯ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ನಿಮ್ಮಲ್ಲಿ ನಿರಂತರ ಪ್ರೋತ್ಸಾಹ ಹಾಗೂ ಸಲಹೆ–ಸೂಚನೆಗಳ ಅತ್ಯವಶ್ಯವಾಗಿದೆ; ಆದ್ದರಿಂದ ನಮ್ಮ ನ್ಯೂನತೆಗಳನ್ನು ಸರಿಪಡಿಸಲು ಹಾಗೂ ನಿಮ್ಮೆಲ್ಲರ ಅಶೋತ್ತರಗಳಿಗೆ ಬೆಂಬಲವಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂಥ ಕ್ರಿಯಾತ್ಮಕ ಸಲಹೆ–ಸೂಚನೆಗಳು ಇದ್ದಲ್ಲಿ, ದಯಮಾಡಿ ನಮ್ಮ ಆಡಳಿತ ಮಂಡಳಿಯ ಯಾವುದೇ ನಿರ್ದೇಶಕರುಗಳಿಗೆ ಹಾಗೂ ಸಂಘದ ಸಿಬ್ಬಂದಿಗಳೊಂದಿಗೆ ಮುಕ್ತವಾಗಿ ಹಂಚಿಕೊಂಡು ಸಹಕಾರ ತತ್ವದ ನೀತಿಯಂತೆ ಸದಸ್ಯರ ಹಿತವನ್ನು ಕಾಯ್ದುಕೊಂಡು; ಸಂಘದ ಅಭಿವೃದ್ಧಿಗೆ ಸಕ್ರಿಯವಾಗಿ ಪಾಲ್ಗೊಳ್ಳಲು ಈ ಮೂಲಕ ಸವಿನಯದಿಂದ ಕೋರಿಕೊಳ್ಳುತ್ತೇನೆ.

ಮಾನ್ಯ ಆಯುಕ್ತರನ್ನು ಒಳಗೊಂಡು ಇಲಾಖೆಯ ಹಿರಿಯ ಅಧಿಕಾರಿಗಳ ಸಲಹೆ ಸಹಕಾರಕ್ಕಾಗಿ ಅವರನ್ನು ಈ ಸುಸಂದರ್ಭದಲ್ಲಿ ಅಭಿನಂದಿಸುವುದರೊಂದಿಗೆ ಎಲ್ಲರಿಗೂ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತೇನೆ. ತಾವೆಲ್ಲರೂ ಉತ್ಸಾಹಪೂರ್ವಕವಾಗಿ ಸಹಕಾರ ಮನೋಭಾವದಿಂದ ನೀಡಲಾಗುತ್ತಿರುವ ಬೆಂಬಲ ಮತ್ತು ಪ್ರೋತ್ರಾಹಕ್ಕೆ ಸಂಘದ ಆಡಳಿತ ಸಮಿತಿ ಸದಸ್ಯರು ಅಭಾರಿಗಳಾಗಿರುತ್ತಾರೆ.

ಧನ್ಯವಾದಗಳೊಂದಿಗೆ,

ಆಡಳಿತ ಸಮಿತಿ ಪರವಾಗಿ



**(ದತ್ತಾತ್ರೇಯ ಬೈರವಾಡಗಿ)**
ಗೌರವ ಕಾರ್ಯದರ್ಶಿ